6)	ಪ್ರೊ. ಪಿ. ವೆಂಕಟರಾಮಯ್ಯ ಭೌತಶಾಸ್ತ್ರ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ	ದಿನಾಂಕ 3.1.96ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಕುವೆಂಪು ವಿಶ್ವವಿದ್ಯಾಲಯದ ಕುಲಪತಿಯವರನ್ನಾಗಿ ನೇಮಿಸಲಾಗಿದೆ.
7)	ಡಾ|| ಎನ್. ರುದ್ರಯ್ಯ, ಪ್ರಾಂಶುಪಾಲರು ಸಂಟ್ರಲ್ ಕಾಲೇಜು, ಬೆಂಗಳೂರು	ದಿನಾಂಕ 16.2.90ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಯವರನ್ನಾಗಿ ನೇಮಿಸಲಾಗಿದೆ. ದಿನಾಂಕ 1.2.93 ರಿಂದ ಎರಡನೇ ಅವಧಿಗೆ ನೇಮಿಸಲಾಗಿದೆ.
8)	ಪ್ರೊ. ಎಂ. ಮುನಿಯಮ್ಮ ಸಸ್ಯಶಾಸ್ತ್ರ, ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ	ದಿನಾಂಕ 16.2.96ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಯವರನ್ನಾಗಿ ನೇಮಿಸಲಾಗಿದೆ.
9)	ಡಾ|| ಎಸ್. ರಾಮೇಗೌಡ, ಪ್ರಾಂಶುಪಾಲರು, ಪಾಂಡಿಚೇರಿ ಇಂಜಿನಿಯರಿಂಗ್ ಕಾಲೇಜು ಪಾಂಡಿಚೇರಿ.	ದಿನಾಂಕ 1.7.90ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯವರನ್ನಾಗಿ ಮೂರು ವರ್ಷಗಳ ಅವಧಿಗೆ ನೇಮಿಸಲಾಗಿದೆ. ದಿನಾಂಕ 2.7.93ರಿಂದ ಜಾರಿಗೆ ಬರುವಂತೆ 2ನೇ ಅವಧಿಗೆ ಕುಲಪತಿ ಯವರನ್ನಾಗಿ ನೇಮಿಸಲಾಗಿದೆ.

ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ 748

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಈಗ ಹಾಲಿ ಇರುವ ಉಪಕುಲಪತಿಗಳಲ್ಲಿ ಯಾರಾದರೂ ಕರ್ನಾಟಕ ಅಥವಾ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದವರು ಇರುವರೇ? ಈ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುವವರು ಯಾರೂ ಉಪಕುಲಪತಿಗಳು ಆಗದಷ್ಟು ಅನರ್ಹರೇ? ಪ್ರತಿಭಾವಂತರು ಯಾರೂ ಇಲ್ಲವೇ?

ಶ್ರೀ ಡಿ. ಮಂಜುನಾಥ್ : ಕುಲಪತಿಗಳನ್ನು ನೇಮಿಸುವುದಕ್ಕೆ ನಮ್ಮ ವಿಶ್ವವಿದ್ಯಾಲಯದ ಕಾಯಿದೆಯಲ್ಲಿ ಪ್ರಕರಣ 11ರ ನಿಯಮ ಇದೆ. ಇವರನ್ನು ನೇಮಿಸಬೇಕಾದರೆ ಸಿಂಡಿಕೇಟಿನಿಂದ ಇಬ್ಬರು ಸದಸ್ಯರನ್ನು, ಒಬ್ಬರು ಯುಜಿಸಿಯಿಂದ ಮತ್ತು ಚಾನ್ಸಲರ್ ಒಬ್ಬರು ಒಟ್ಟು 4 ಜನ ಸಮಿತಿ ಸೇರಿ ಮೂರು ಹೆಸರುಗಳನ್ನು ಶಿಫಾರಸ್ಸು ಮಾಡುತ್ತಾರೆ. ಮೂರು ಹೆಸರಿನಲ್ಲಿ ಒಬ್ಬರು ಕುಲಪತಿಯನ್ನು ನಮ್ಮ ರಾಜ್ಯಪಾಲರು ನೇಮಕ ಮಾಡುತ್ತಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ.

ಶ್ರೀ ಡಿ.ಆರ್. ಪಾಟೀಲ್ : ನನ್ನ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ. ಕರ್ನಾಟಕ ಮತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯದವರು ಯಾರಾದರೂ ಉಪಕುಲಪತಿಗಳಾಗಿದ್ದಾರಾ ಎನ್ನುವುದಕ್ಕೆ ನೀವು ಉತ್ತರ ಕೊಡಲಿಲ್ಲ. ನೀವು ಕಾನೂನಿನಲ್ಲಿ ಹೇಗಿದೆ ಎನ್ನುವುದನ್ನು ಹೇಳಿದಿರಿ.

ಶ್ರೀ ಡಿ. ಮಂಜುನಾಥ : ನಾನು ನೇಮಕ ಮಾಡುವುದು ಯಾವ ರೀತಿ ಎಂಬುದನ್ನು ತಿಳಿಸಿದೆ. ಈ ಪ್ರದೇಶಕ್ಕೆ ಮಾಡಬೇಕು, ಆ ಪ್ರದೇಶಕ್ಕೆ ನೇಮಕ ಮಾಡಬೇಕು ಎನ್ನುವ ಪ್ರಶ್ನೆ ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಒಬ್ಬರಾದರೂ ಇದ್ದಾರೋ ಇಲ್ಲವೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಭಾಗದಲ್ಲಿ ಕೂಡ ವೈಸ್ ಚಾನ್ಸಲರ್ ಆಗುವುದಕ್ಕೆ ಅಭ್ಯರ್ಥಿಗಳು ಇದ್ದಾರೆ. ಆದರೆ ತಾವೇನು ಸಮಿತಿಯನ್ನು ರಚನೆ ಮಾಡುತ್ತೀರಲ್ಲಾ ರೂಲ್ 11ರ ಪ್ರಕಾರ ಆಲ್ಲಿ ಏನಾಗುತ್ತದೆ ಎಂದರೆ ಯಾವ ಭಾಗದವರು ಅಥವಾ ಯಾರಿಗೆ ಕ್ಯಾಂಡಿಡೇಟ್ ಸೆಲೆಕ್ಟ್ ಆಗಿ ಬರುವಂತಹ ಸಾಧ್ಯತೆಯಿದೆ. ಆದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯವಾಗಲಿ, ಗುಲ್ಬರ್ಗಾ ವಿಶ್ವವಿದ್ಯಾಲಯವಾಗಲಿ, ಉತ್ತರ ಕರ್ನಾಟಕದ ಭಾಗದಿಂದ ಇಲ್ಲಿಯವರೆಗೆ ತಾವು ಏನು ಅನೇಕ ಕುಲಪತಿಗಳನ್ನು ಮಾಡಿದ್ದೀರಿ ಅದರಲ್ಲಿ ಒಬ್ಬರೂ ಕೂಡ ಇಲ್ಲ. ಅಂದರೆ ಆ ಯೂನಿವರ್ಸಿಟಿಯಲ್ಲಿ ಕೆಲಸ ಮಾಡತಕ್ಕಂಥವರು ಯಾರೂ ಪ್ರತಿಭಾವಂತರು ಇಲ್ಲವೇ ಅಥವಾ ನೀವು ಮಾಡತಕ್ಕಂಥ ಸಮಿತಿಯಲ್ಲಿ ವ್ಯತ್ಯಾಸ ಇದೆಯೇ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಎರಡನೆಯದು, ಏನು ಅಂದರೆ ಇಲ್ಲಿಯವರೆಗೆ ಅಧ್ಯಕ್ಷರೆ, ಹಿಂದೆ ಸರ್ಕಾರದಲ್ಲಿ ಅನೇಕ ಸಾರಿ ಸಮಿತಿ ಮಾಡಿದರೂ ಕೂಡ ಕೆಲವು ವೀಕರ್ ಸೆಕ್ಷನ್ಸ್‌ಗೆ ಸೇರಿದಂಥವರಿಗೆ ವೈಸ್ ಚಾನ್ಸೆಲರ್ ಪೋಸ್ಟ್‌ಗಳನ್ನು ಅಲ್ಲಿ ಇಲ್ಲಿ ಕೊಡುತ್ತಾ ಇದ್ದರು. ಉದಾಹರಣೆಗೆ ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ನಾಗರಾಜ್‌ರವರು ಇದ್ದರು. ನಂತರ ಬಹುಶಃ ತಮ್ಮ ಸರ್ಕಾರ ಬಂದ ಮೇಲೆ 4-5 ನೇಮಕಾತಿಗಳನ್ನು ಮಾಡಿದ್ದೀರಿ ಒಬ್ಬರು ಪರಿಶಿಷ್ಟ ಜಾತಿಯವರನ್ನೂ ಕೂಡ ತಾವು ಉಪಕುಲಪತಿಗಳ ಸ್ಥಾನಕ್ಕೆ ಕೂರಿಸತಕ್ಕಂಥದ್ದು ಮಾಡಲಿಲ್ಲ. ಏನಾದರೂ ಕೇಳಿದರೆ ಅರ್ಹತೆ ಎಂದು ಹೇಳುತ್ತೀರಿ. ಅರ್ಹತೆ ಇದ್ದವರನ್ನು ಮಾಡಿ. ಯಾರಿಗೆ ಅರ್ಹತೆ ಇರುವುದಿಲ್ಲ ಅವರಿಗೆ ನಾವು ಉಪಕುಲಪತಿಗಳವನ್ನಾಗಿ ನೇಮಕ ಮಾಡಿ ಎಂದು ಹೇಳುವುದಿಲ್ಲ. ಆ ಭಾಗದಲ್ಲಿ ಯಾರು ಅರ್ಹತೆಯನ್ನು ಪಡೆದಿದ್ದಾರೆ ಅವರನ್ನು ಅಥವಾ ಈ ಭಾಗದಲ್ಲಿ ಯಾರಾದರೂ ಅರ್ಹತೆ ಇರತಕ್ಕಂತಹವರನ್ನು ಈ ಸಮ್ಮ ವೀಕರ್ ಸೆಕ್ಷನ್ಸ್‌ನಲ್ಲಿ ನೀವು ಮಾಡಿದರೆ ಎಲ್ಲರಿಗೂ ನೀವು ಒಂದು ಸಾಮಾಜಿಕ ನ್ಯಾಯವನ್ನು ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ನಿಮಗೆ ಬೇಕಾದವರನ್ನು ಸಮಿತಿಯೊಳಗೆ ಹಾಕಿಕೊಳ್ಳುವುದು; ಅವರಿಂದ ರೆಕಮೆಂಡೇಷನ್ ತರಿಸಿಕೊಳ್ಳುವುದು ಆ ರೆಕಮೆಂಡೇಷನ್ ರಾಜ್ಯಪಾಲರಿಗೆ ಕಳುಹಿಸುವುದು, ಒಪ್ಪಿದ್ದೇವೆ, ನೀವು ಒಪ್ಪಿದ್ದೇವೆ ಎಂದು ಮಾಡಿದರೆ ಇದರಲ್ಲಿ ಅನ್ಯಾಯವಾಗುತ್ತದೆ. ಇದನ್ನು ಯಾವ ರೀತಿಯಾಗಿ ಸರಿಪಡಿಸುತ್ತೀರಿ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದಂಥ ಖರ್ಗೆಯವರು ಒಂದು ಮಾತನ್ನು ಹೇಳಿದರು, ಉತ್ತರ ಕರ್ನಾಟಕದಿಂದ ಒಬ್ಬರನ್ನೂ ಮಾಡಿಲ್ಲ ಎಂದು. ಮಂಗಳೂರು ವಿಶ್ವವಿದ್ಯಾಲಯಕ್ಕೆ ಸವದತ್ತಿಯವರಾದ ಹಿಂದೂರಾವ್ ಎಂಬುವವರು ಮೊನ್ನೆ ತಾನೇ ಮೂರು ತಿಂಗಳ ಹಿಂದೆ ನಿವೃತ್ತಿಯಾದರು. ಆಮೇಲೆ ನಾಗರಾಜರವರು ಹೋದ ಬಳಿಕ ಪರಿಶಿಷ್ಟ ಜಾತಿಯವರನ್ನು ಯಾರನ್ನು ಮಾಡಿಲ್ಲ ಎಂದು ಹೇಳಿದರು; ಮೈಸೂರು ವಿಶ್ವವಿದ್ಯಾಲಯಕ್ಕೆ ಡಾ॥ ರುದ್ರಪ್ಪನವರನ್ನು ಮಾಡಿದ್ದೆವು, ಡಾ॥ ಚಿಲುವದಾಸ್ ಅವರನ್ನು ಮಾಡಿದ್ದೆವು. ಅವರೂ ಪರಿಶಿಷ್ಟ ಜಾತಿಯವರು; ಆದರೆ, ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸುಮ್ಮನೆ ಗೊತ್ತಿಲ್ಲದವರಿಗೆ ಹೇಳಿದಹಾಗೆ ಹೇಳಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಕುಲಪತಿಗಳಾದ ಮೇಲೆ ಮನೆಯ ವಿಳಾಸವನ್ನು ತೆಗೆದುಕೊಂಡು ಮುಖ್ಯಮಂತ್ರಿ, ಮಂತ್ರಿಗಳು ರಾಜ್ಯಪಾಲರುವರುಗಳ ಮನೆ ಎಲ್ಲಾ ಕಡೆ ಓಡಾಡುತ್ತಾರೆ.

SHRI KAGODU THIMMAPPA : We cannot tolerate injustice. ಇದರಿಂದ ರೀಜನಲ್ ಇಮಬ್ಯಾಲೆನ್ಸ್ ಇದೆ. ಒಬ್ಬರನ್ನಾದರೂ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿರತಕ್ಕಂಥವರು, ಅಥವಾ ಕರ್ನಾಟಕ ವಿಶ್ವವಿದ್ಯಾಯಲಯದಲ್ಲಿ ಕೆಲಸ ಮಾಡುತ್ತಿರುವ ಇದುವರೆಗೂ ನೇಮಕ ಮಾಡಲಿಲ್ಲ ಅಂದರೆ ಆ ಭಾಗದ ಜನ ಏನು ತಿಳಿದುಕೊಳ್ಳಬೇಕು.

ಶ್ರೀ ಡಿ. ಮಂಜುನಾಥ್ : ಒಂದು ನಿಮಿಷ ದಯವಿಟ್ಟು ಕೇಳಿ. ನಾನು ಈಗಾಗಲೇ ಹೇಳಿದೆ, ಉತ್ತರ ಕರ್ನಾಟಕಕ್ಕೆ ಯಾರನ್ನೂ ಮಾಡಿಲಿಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ಮೊನ್ನೆ ನಿವೃತ್ತಿಯಾದ ಧಾರವಾಡ ಸವದತ್ತಿಯವರ ಬಗ್ಗೆ ಹೇಳಿದೆ. ಇದನ್ನು ನಾನು ಮೊದಲೇ ಹೇಳಿದೆ ಪ್ರಕರಣ 11ರ ಪ್ರಕಾರ ಏನು ವಿಶ್ವವಿದ್ಯಾನಿಲಯದ ಕಾಯಿದೆ ಇದೆ, ಅದರ ಪ್ರಕಾರ ಮಾಡುತ್ತಿದ್ದೇವೆ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ.

ಶ್ರೀ ವೈ. ರಾಮಕೃಷ್ಣ : ತಾವು ರೂಲ್ 11ರ ಪ್ರಕಾರ ಎಂದು ಹೇಳಿದಿರಿ. ನಾನು ತಮಗೆ ಹೇಳುತ್ತಿದ್ದೇನೆ, ರೀಜನಲ್ ಇಮಬ್ಯಾಲೆನ್ಸ್ ಆಗದ ಹಾಗೆ ಮತ್ತು ಆಯಾ ಯೂನಿವರ್ಸಿಟಿ ಜ್ಯೂರಿಸಡಿಕ್ಷನ್ನಿನಲ್ಲಿ ಇರತಕ್ಕಂಥ ಅಧ್ಯಾಪಕರು ಅಥವಾ ಪ್ರೊಫೆಸರ್ಸ್ ಯಾರು ಇರುತ್ತಾರೋ ಅಂತಹವರನ್ನು ನೇಮಕ ಮಾಡಬೇಕೆಂಬುದು ಒಂದು. ಎರಡನೆಯದು ಈ ವೀಕರ್ ಸೆಕ್ಷನ್‌ಗೆ ಆದ್ಯತೆ ಕೊಡಬೇಕು ಎಂದು ಹೇಳಿ ರೂಲನ್ನು ಏಕೆ ಅಮೆಂಡ್ ಮಾಡಬಾರದು; ಇವರೆಡನ್ನೂ ನೀವು ತರಬಹುದಲ್ಲಾ. ಇದರ ಬಗ್ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ.

ಶ್ರೀ ಡಿ.ಆರ್. ಪಾಟೀಲ್ : ಸ್ವಾಮಿ, ಈ ಕಾನೂನು 1976ರೊಳಗೆ ಪಾಸಾಯಿತು, 1980ರಿಂದ 96ರವರೆಗೆ 26 ಮಂದಿ ಉಪಕುಲಪತಿಗಳ ನೇಮಕಾತಿಯಾಯಿತು. ಆದರೆ

ಆದರೊಳಗೆ 21 ಬರೀ ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯದವರು ಮಾತ್ರ ಆಗಿದ್ದಾರೆ. ಅಂದರೆ ಬೆಂಗಳೂರು ಮೈಸೂರಿನಲ್ಲಿರುವರಷ್ಟೇ ಪ್ರತಿಭಾವಂತರು, ಅವರಿಗೆ ಮಾತ್ರ ಅರ್ಹತೆ ಇದೆ ಉಳಿದವರಿಗೆ ಇಲ್ಲ ಎನ್ನುವಂಥ ಭಾವನೆ ಈ ಸರ್ಕಾರಕ್ಕೇನಾದರೂ ಇದೆಯೇ? ಈಗ ಮಂತ್ರಿಗಳು ಏನು ಹೇಳುತ್ತಾರೆ ಅದು ರಾಜ್ಯಪಾಲರು ಮಾಡುವುದು ಎಂದು. ಎಲ್ಲಾ ಆಡಳಿತ ಕಾನೂನು ಪ್ರಕಾರ ರಾಜ್ಯಪಾಲರೇ ಮಾಡುವುದು. ಆದರೆ ನೇಮಕಾತಿ ಆಗುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ, ಸರ್ಕಾರದ ಉದ್ದೇಶ ಇದ್ದೇ ಇರುತ್ತದೆ ಎನ್ನುವುದು ಆಡಳಿತವನ್ನು ನೋಡುವವರಿಗೆ ಗೊತ್ತಿದೆ. ದಯವಿಟ್ಟು ಈಗಿರುವ ಕಾನೂನಿನೊಳಗೆ ಈ ಪ್ರಾದೇಶಿಕ ಅನ್ಯಾಯವನ್ನು ಸರಿಪಡಿಸಲಿಕ್ಕೆ ಸಾಧ್ಯವಿರಲಿಲ್ಲ ಅಂದರೆ ನೀವೇನಾದರೂ ಮುಂದೆ ಈ ಅಧಿನಿಯಮಗಳಿಗೆ ತಿದ್ದುಪಡಿ ತರುವುದಕ್ಕೆ ಮುಂದಿನ ಅಧಿವೇಶನದೊಳಗೆ ಕ್ರಮ ಕೈಗೊಳ್ಳುತ್ತೀರಾ ಅಥವಾ ಈ ಅನ್ಯಾಯ ಇದೇ ರೀತಿ ಮುಂದುವರೆಯಬೇಕೆಂದು ನಿಮ್ಮ ಇಚ್ಛೆಯೇ?

ಶ್ರೀ ಡಿ. ಮಂಜುನಾಥ್ : ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಈಗ ರೀಜನಲ್ ಇಂಬ್ಯಾಲೆನ್ಸ್ ಸರಿಮಾಡುವುದಕ್ಕೆ ಆಯಾ ಏರಿಯಾದವರನ್ನೇ ಮಾಡಬೇಕೆನ್ನುವುದು ಸದ್ಯಕ್ಕಂತೂ ನಮ್ಮಲ್ಲಿ ಇಲ್ಲ. ಈಗ ಅವರು 76ರಿಂದ ಯಾರೂ ಆಗಿಲ್ಲ ಎಂದು ಹೇಳಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆ ಕಡೆಯವರೇ ಇದ್ದರು. ಆದರೆ ಇತ್ತೀಚೆಗೆ ಆಗಿಲ್ಲ. ಆದ್ದರಿಂದ ನಿಯಮಾವಳಿ ಏನಿದೆ ಅದನ್ನು ಬದಲಾವಣೆ ಮಾಡಬೇಕು. ಅದನ್ನು ಮಾಡಬೇಕೆನ್ನುವುದನ್ನು ವಿಚಾರ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ನಮಗೆ ಖಚಿತವಾದ ಭರವಸೆ ಮಂತ್ರಿಗಳಿಂದ ಬೇಕು, ಅನ್ಯಾಯವಂತೂ ಆಗಿದೆ. ಆಗಿರುವಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ಮತ್ತು ನಿಯಮಗಳಲ್ಲಿ ಬದಲಾವಣೆ ಮಾಡುವುದಕ್ಕೆ ಪರೀಶೀಲಿಸುವುದು ಏನು? ಆ ಬಗ್ಗೆ ಖಂಡಿತವಾದ ಭರವಸೆಯನ್ನು ಕೊಡಿ. ಅನ್ಯಾಯವಾಗಿರುವಂಥದ್ದು ನಿಜ, ಇದನ್ನು ಬದಲಾವಣೆ ಮಾಡುತ್ತೇವೆ ಎನ್ನುವಂಥ ಭರವಸೆ ತಮ್ಮಿಂದ ಬೇಕು.

ಶ್ರೀ ಡಿ. ಮಂಜುನಾಥ್ : ಅನ್ಯಾಯ ಆಗಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಕಾಯಿದೆ ಪ್ರಕಾರ ಮಾಡಿದ್ದಾರೆ. ಅದನ್ನು ಮಾಡುವುದಕ್ಕೆ ಪ್ರೊಸೀಜರ್ ಇದೆ. ಅದರ ಪ್ರಕಾರ ಮಾಡಿದ್ದಾರೆ. ಅದಕ್ಕೋಸ್ಕರ ಅನ್ಯಾಯ ಎಂದು ನಾನು ಏಕೆ ಹೇಳಲಿ? ಅದು ಅನ್ಯಾಯ ಆಗಿಲ್ಲ. ಅವರಿಗೆ ಅವಕಾಶ ಸಿಕ್ಕಿಲ್ಲ ಎಂದು ನೀವು ಹೇಳುತ್ತಿದ್ದೀರಿ. ಅದು ಬೇರೆ ವಿಷಯ. ಆ ಕಮಿಟಿಯವರು ರಾಜ್ಯಪಾಲರಿಗೆ ಒಂದು ಪ್ಯಾನಲ್ ಕೊಡುತ್ತಾರೆ, ರಾಜ್ಯಪಾಲರು ಆ ಪ್ಯಾನಲ್‌ನಲ್ಲಿ ಒಬ್ಬರನ್ನು ನೇಮಕ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಎಲ್ಲಾ ಗೊತ್ತಿದೆ, ರಾಜ್ಯಪಾಲರಿಗೆ ಈ ಸದನದ ಕಳಕಳಿಯನ್ನು ಈ ಸದನದ ಅಕ್ಷೇಪಣೆಗಳನ್ನು ತಿಳಿಸಿ. ಈ ರೀತಿ ಇನ್ನು ಮೇಲೆ ಮಾಡಕೂಡದು. ಏಕೆ ಹೇಳುತ್ತಿದ್ದೇವೆ ಎಂದರೆ ವೀರೇಂದ್ರಪಾಟೀಲರು ಇವ್ಹಾಗ ಸಮದತ್ತಿಯವರು ನೇಮಕ ಆದರು,

ಎನ್.ಆರ್. ಶಟ್ಟಿಯವರು ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಮೂನೆ ಆದರು. ಆಂದರೆ ಇವೆಲ್ಲಾ ಒಳಗೆ ಹೇಗೆ ನಡೆಯುತ್ತವೆ ಎಂಬುದು ನಮಗೆ ಗೊತ್ತಾಗುವುದಿಲ್ಲವೇ? ಹೀಗೆ ಮಾಡುವಂಥ ವಿಚಾರದಲ್ಲಿ ನ್ಯಾಯಸಮ್ಮತವಾಗಿರಬೇಕು, ಸಾಮಾಜಿಕ ನ್ಯಾಯೋಚಿತ ರೀತಿಯಲ್ಲಿ ಇರಬೇಕು. ಏಕೆಂದರೆ ಉತ್ತರ ಕನ್ನಡ ಜಿಲ್ಲೆಯಿಂದ ಅನೇಕ ವಿಷಯದಲ್ಲಿ ನಮ್ಮನ್ನು ಇವೊತ್ತು ಕಡಗಣಿಸುತ್ತಿದ್ದಾರೆ ಎಂಬ ಮಾತು ಕೇಳಿ ಬರುತ್ತಿದೆ. ಇದಕ್ಕೆ ತಾವು ಅವಕಾಶ ಕೊಡಬಾರದು. ವಿಶೇಷವಾಗಿ ಇವೊತ್ತು ಹರಿಜನ-ಗಿರಿಜನರಿಗೆ ನಾವು ಏನನ್ನಾದರೂ ಕೊಡಬೇಕು. ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ಇರಬೇಕಾದಂಥ ಪದ್ಧತಿಯ ಪರಂಪರೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆ ಬಗ್ಗೆ ರಾಜ್ಯಪಾಲರಿಗೆ ಹೇಳಬೇಕಾಗುತ್ತದೆ. ಸರ್ಕಾರದ ನಿಲುವು ಹೀಗೆ ಇದೆ, ಹರಿಜನ-ಗಿರಿಜನರಿಗೆ ಪ್ರಾತಿನಿಧ್ಯ ಇಲ್ಲ ಅಸಮತ್ತಿ ಇದೆ, ಇದು ಸದನದಲ್ಲೂ ಕೂಡ ಇದಕ್ಕೆ ಸಾಕಷ್ಟು ಆಕ್ಷೇಪಣೆ ಬಂದಿದೆ ದಯವಿಟ್ಟು ಇದನ್ನು ರೆಕ್ಟಿಫೈ ಮಾಡಬೇಕೆಂದು ಹೇಳಬೇಕಾಗುತ್ತದೆ. ನೀವು ಈ ಬಗ್ಗೆ ರಾಜ್ಯಪಾಲರಿಗೆ ಪತ್ರ ಬರೆಯಿರಿ.

ಶ್ರೀ ಡಿ. ಮಂಜುನಾಥ್ : ಸ್ವಾಮಿ, ಈಗ ಹಿರಿಯಸದಸ್ಯರಾದಂಥ ಕಾಗೋಡು ತಿಮ್ಮಪ್ಪನವರು ಏನು ಹೇಳಿದರು, ಅದೇ ರೀತಿ ನಮ್ಮ ಸದನದ ಸದಸ್ಯರು ಅಭಿಪ್ರಾಯವನ್ನು ರಾಜ್ಯಪಾಲರ ಹತ್ತಿರ ಮಾತನಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಈ ಅನ್ಯಾಯವನ್ನು ಕಡಿಮೆ ಮಾಡಲಿಕ್ಕೆ ಆಗುವುದಿಲ್ಲ. ಇದು ಹೀಗೇ ಮುಂದುವರಿಯುತ್ತದೆ. ನಾವು 80ನೇ ಇಸವಿಯಿಂದಲೂ ನೋಡಿಕೊಂಡು ಬಂದಿದ್ದೇವೆ. ಸುಮಾರು 16 ವರ್ಷಗಳಿಂದ ನಮಗೆ ಅನ್ಯಾಯವಾಗಿದೆ. ಈ ಕಾನೂನಿಗೆ ಬದಲಾವಣೆಯನ್ನು ತರುವುದಕ್ಕೆ ಈ ಸದನಕ್ಕೆ ಅಧಿಕಾರ ಇದೆ. ನೀವು ಪ್ರಾದೇಶಿಕ ಸಮಾನತೆಯೊಳಗೆ ಅನ್ಯಾಯ ಆಗದಂತೆ ರೀತಿಯಲ್ಲಿ ಕಾನೂನಿನಲ್ಲಿ ಬದಲಾವಣೆಯನ್ನು ತರಲಿಕ್ಕೆ, ಭರವಸೆಯನ್ನು ಕೊಡಲಿಕ್ಕೆ ನಿಮಗೆ ತೊಂದರೆ ಏನು ಇದೆ? ನಾವು ಇದನ್ನು ಸರಿಮಾಡಿಕೊಂಡು ಹೋಗಬೇಕೆಂಬುದೇ ತಮ್ಮ ಅಭಿಪ್ರಾಯವೇ? ಇದಕ್ಕೆ ತೊಂದರೆ ಏನು ಇದೆ ಎಂಬುದನ್ನು ಹೇಳಿ?

ಶ್ರೀ ಡಿ. ಮಂಜುನಾಥ್ : ನಾನು ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಈಗಾಗಲೇ ಹೇಳಿದೆ.

ಶ್ರೀ ಯು.ಜಿ. ಪೂಜಾರ್ : ಮಾನ್ಯ ಸಚಿವರು ಉತ್ತರ ಕರ್ನಾಟಕಕ್ಕೆ ಈ ವಿಷಯದಲ್ಲಿ ಉಪಕುಲಪತಿಗಳನ್ನು ನೇಮಿಸಲಿಕ್ಕೆ ಯಾವುದೇ ಅನ್ಯಾಯ ಆಗಿಲ್ಲ ಎಂದು ಹೇಳಿದರು. ಆದರೆ 1980ರಿಂದ 96ರವರೆಗೆ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಿಗೆ ಉಪಕುಲಪತಿಗಳನ್ನು ನೇಮಕ ಮಾಡುವಾಗ 26 ಉಪಕುಲಪತಿಗಳಲ್ಲಿ ಇಬ್ಬರು ಮಾತ್ರ ಉತ್ತರ ಕನ್ನಡಕ್ಕೆ ಸಂಬಂಧಿಸುತ್ತಾರೆ. ಅಧ್ಯಕ್ಷರೇ ಇದು ಗಂಭೀರವಾದ ವಿಷಯ. ಉತ್ತರ ಕರ್ನಾಟಕ ಬಹಳಷ್ಟು ವಿಷಯಗಳಲ್ಲಿ

ಹಿಂದುಳಿದಿದೆ. ಆದರೆ, ಇಂತಹ ಒಂದು ವಿಷಯದಲ್ಲಿ ಹಿಂದುಳಿಯಬಾರದು; ಏಕೆಂದರೆ ಧಾರವಾಡ ಹಾಗೂ ಅನೇಕ ಕೇಂದ್ರಗಳಲ್ಲಿ ಸಾಹಿತಿಗಳು, ಜ್ಞಾನಪೀಠಪ್ರಶಸ್ತಿ ಪಡೆದಂಥ ಅತ್ಯುತ್ತಮ ಜನ ಇರುವಾಗ ದಯವಿಟ್ಟು ತಾವು ಇದನ್ನು ಗಂಭೀರವಾಗಿ ಪರಿಶೀಲನೆ ಮಾಡಿ; ಏಕೆಂದರೆ ತಾವು ರಾಜ್ಯಪಾಲರ ಮೇಲೆ ಹೇಳಿದಿರಿ, ರಾಜ್ಯಪಾಲರು ಯಾವ ರೀತಿಯಾಗಿ ಕಾರ್ಯವೈಖರಿ ಮಾಡುತ್ತಾರೆ ಎಂಬುದು ನಮಗೆ ಗೊತ್ತಿದೆ. ಆದುದರಿಂದ ದಯವಿಟ್ಟು ಇನ್ನು ಮುಂದೆ ಗಂಭೀರವಾಗಿ ಪರಿಶೀಲನೆ ಮಾಡಿ ಇದನ್ನು ಬಗೆಹರಿಸುವ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ : ತಾವು ರಾಜ್ಯಪಾಲರ ಮೇಲೆ ಆಕ್ಷೇಪಣೆ ಮಾಡುವುದು ಬೇಡ. ಅವರು ಏನು ಹೇಳಿದರು ಎಂದರೆ ಅಲ್ಲಿ ಯಾವ ರೀತಿ ನಡೆಯುತ್ತದೆ ಎಂಬುದು ನಮಗೆ ಗೊತ್ತಿದೆ ಎಂದರು, ಆ ಶಬ್ದ ನಮ್ಮ ಮನಸ್ಸಿನಲ್ಲಿ ಬೇಡ. ನಾನು ಈಗಾಗಲೇ ಹೇಳಿದ್ದೇನೆ. ನಾನು ಅವರ ಹತ್ತಿರ ಮಾತನಾಡುತ್ತೇನೆ. ಮಾತನಾಡಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಉಪಾಧ್ಯಕ್ಷರೆ, ಧಾರವಾಡವು ಕರ್ನಾಟಕ ರಾಜ್ಯದಲ್ಲಿ ಒಂದು ಪ್ರತಿಷ್ಠಿತವಾದಂಥ ಒಂದು ವಿದ್ಯಾ ಕೇಂದ್ರ. ಅದು ವಿಶ್ವವಿದ್ಯಾಲಯದಂಥ ವಿದ್ಯಾ ದೇಗುಲಗಳಲ್ಲಿ ಈ ಉಪಕುಲಪತಿಗಳ ನೇಮಕಾತಿಯಲ್ಲಿ ಇಂತಹ ಒಂದು ಪ್ರಶ್ನಾತೀತ ನೇಮಕಾತಿ ಆಗುತ್ತಿದೆ ಎಂದರೆ ಆ ಭಾಗದ ಜನರ ಮನಸ್ಸಿಗೆ ಬಹಳ ನೋವಾಗುತ್ತದೆ. ಜೊತೆಗೆ ಅಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಂದ ಕೂಡ ಇದರ ಬಗ್ಗೆ ಬಹಳಷ್ಟು ಟೀಕೆ ಟಿಪ್ಪಣಿಗಳು ಬಂದಿವೆ. ಆ ಕಾರಣ ಅಲ್ಲಿಯವರನ್ನೇ ಉಪಕುಲಪತಿಗಳನ್ನಾಗಿ ಮಾಡುವುದರಿಂದ ಆ ಭಾಗದಲ್ಲಿ ಇರತಕ್ಕಂಥ ಆಡಳಿತ ವ್ಯವಸ್ಥೆಯ ಬಗ್ಗೆಯೂ ಕೂಡ ಅವರು ಸಂಪೂರ್ಣವಾಗಿ ತಿಳಿದುಕೊಂಡವರಿರುತ್ತಾರೆ. ಜೊತೆಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಅಲ್ಲಿಯ ವಿದ್ಯಾಪರ ಅಭಿವೃದ್ಧಿಗೆ ಪ್ರಯತ್ನ ಮಾಡತಕ್ಕಂಥ ಕ್ರಿಯಾಶಕ್ತಿಯನ್ನು ಅವರು ಹೊಂದಿರುವರಾಗಿರುತ್ತಾರೆ. ಆ ಕಾರಣ ತಾವು ಈ ಒಂದು ವಿಷಯದಲ್ಲಿ ಹೆಚ್ಚಿನ ಜಾಗ್ರತಯನ್ನು ಇನ್ನು ಮುಂದೆಯಾದರೂ ವಹಿಸಿ ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ : ಅವರು ಏನು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ವರದಿ ಮಂಡನೆ

ಉಪಾಧ್ಯಕ್ಷರು : ವಿಧಾನಸಭೆಯ ನಿಯಮಗಳ ಸಮಿತಿಯ ವರದಿ 1994-95ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಿರುವ ವಿಷಯ ಸಮಿತಿಗಳು ಎರಡು ವರ್ಷಗಳ ಕಾಲ ನಡೆಸಿದ ಕಾರ್ಯನಿರ್ವಹಣೆಯ ಅನುಭವದಲ್ಲಿ ಕೆಲವೊಂದು ನ್ಯೂನ್ಯತೆಗಳು ಕಂಡುಬಂದ ಕಾರಣ ದಿನಾಂಕ 4-3-96ರಂದು ವಿಧಾನಸಭೆಯ ಕಾರ್ಯಕಲಾಪ ಸಮಿತಿಯ ಸಭೆಯಲ್ಲಿ